# ಮತ್ತೆ ಗೂಡು ಸೇರಿದ ಹಕ್ಕಿಗಳು

■ ಈರಣ್ಣ ಬೆಂಗಾಲಿ


ಕಲೆ: ಸಂತೋಷ್ ಸಸಿಹಿತ್ಲು

ವಿನುತಾ ತಾನು ಓದುವ ಶಾಲೆಯಲ್ಲಿ ಚಿರಪರಿಚಿತ ವಿದ್ಯಾರ್ಥಿನಿ ಆಗಿದ್ದಳು. ಓದಿನಲ್ಲಿ ಮಾತ್ರವಲ್ಲದೆ ಭಾಷಣ, ಗಾಯನ, ನೃತ್ಯ ಹೀಗೆ ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸುತ್ತಿದ್ದಳು. ವಿನುತಾಳು ಆರನೇ ತರಗತಿಯಲ್ಲಿ ಓದುತ್ತಿದ್ದಳಾದರೂ ಬುದ್ಧಿವಂತಿಕೆಯಲ್ಲಿ ದೊಡ್ಡವರ ಹಾಗೆ ವಿಚಾರ ಮಾಡುತ್ತಿದ್ದಳು. ಪರಿಸರಪ್ರೇಮಿ ಆಗಿದ್ದಳು. ಊಟದ ವಿರಾಮದಲ್ಲಿ ಶಾಲೆಯ ಆವರಣದಲ್ಲಿದ್ದ ಕೈತೋಟ ಮತ್ತು ಗಿಡಗಳಿಗೆ ತಪ್ಪದೇ ನೀರುಣಿಸುತ್ತಿದ್ದಳು. ಶಾಲೆಯಲ್ಲಿ 'ಇಕೋ ಕ್ಲಬ್' ಎಂಬ ಹೆಸರಿನಡಿ ಪರಿಸರಕ್ಕೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳನ್ನು ಆಗಾಗ್ಗೆ ಹಮ್ಮಿಕೊಂಡು ಮಕ್ಕಳಲ್ಲಿ ನಿಸರ್ಗದ ಮಹತ್ವ ಕುರಿತು ಜಾಗೃತಿಯನ್ನು ಮೂಡಿಸುತ್ತಿದ್ದರು. ವಿನುತಾ ಬಹಳ ಆಸಕ್ತಿಯಿಂದ ಕಾರ್ಯಕ್ರಮವನ್ನು ಕೇಳುತ್ತಿದ್ದಳು.

ಶಾಲೆಯಲ್ಲಿ ಇಕೋ ಕ್ಲಬ್ ವತಿಯಿಂದ ಒಂದು ದಿನ ಹತ್ತಿರದ ಔಷಧ ವನಕ್ಕೆ ಪಿಕ್‌ನಿಕ್ ಹೋಗುವ ವಿಷಯವನ್ನು ಮಕ್ಕಳಿಗೆ ಶಿಕ್ಷಕರು ತಿಳಿಸಿದರು. ಇದಕ್ಕೆ ನಿಮ್ಮ ನಿಮ್ಮ ಪಾಲಕರ ಸಹಿ ಹಾಕಿಸಿಕೊಂಡು ಬರುವಂತೆ ಎಲ್ಲಾರಿಗೂ ಒಪ್ಪಿಗೆ ಪತ್ರವನ್ನು ಶಿಕ್ಷಕರು ನೀಡಿದರು. ಮಕ್ಕಳು ತಮ್ಮ ತಂದೆ ತಾಯಿಯಿಂದ ಒಪ್ಪಿಗೆ ಪತ್ರಕ್ಕೆ ಸಹಿ ಹಾಕಿಕೊಂಡು ಬಂದರು. ಪಿಕ್‌ನಿಕ್ ಹೋಗುವ ದಿನ ಬಂತು, ಶಾಲೆಯಿಂದಲೇ ಬಸ್‌ನಲ್ಲಿ ಔಷಧ ವನಕ್ಕೆ ಹೋದರು. ಶಿಕ್ಷಕರು ಸ್ಥಳದ ಮಹತ್ವವನ್ನು ತಿಳಿಸುತ್ತಾ 'ನೋಡಿ ಮಕ್ಕಳೆ, ಇದು ಔಷಧ ವನ, ಇಲ್ಲಿ ಗಿಡಮೂಲಿಕೆಗಳ ಸಸಿ, ಬಳ್ಳಿ, ಮರಗಳು ಇವೆ. ಆಯುರ್ವೇದ ಚಿಕಿತ್ಸೆಯಲ್ಲಿ ಇವನ್ನು ಬಳಸುವರು. ಆಯುರ್ವೇದ ಚಿಕಿತ್ಸೆಗೆ ನಮ್ಮ ದೇಶ ಹೆಸರುವಾಸಿಯಾಗಿದೆ' ಎಂದು ಹೇಳುತ್ತಾ ಔಷಧ ವನದಲ್ಲಿರುವ ಸಸಿ, ಗಿಡಮರಗಳ ಸಾಮಾನ್ಯ ಹೆಸರು, ವೈಜ್ಞಾನಿಕ ಹೆಸರಿನ ವಿವರ ತಿಳಿಸುತ್ತಾ ಹೋದರು. ಈ ಗಿಡಮೂಲಿಕೆಯ ವನದಲ್ಲಿನ ಸಸಿ, ಬೇರು, ಕಾಂಡ, ತೊಗಟೆ, ಹೂವು, ಎಲೆ, ಕಾಯಿ, ಹಣ್ಣು ವಿವಿಧ ರೋಗ ರುಜಿನಗಳಿಗೆ ಬಳಸುವರು ಎಂದು ಹೇಳಿದರು. ಅಲ್ಲಿದ್ದ ಯಾವ ಸಸಿಗೂ ಗಾಸಿಯನ್ನು ಮಾಡದಂತೆ ಎಚ್ಚರ ವಹಿಸಲು ಹೇಳಿ ಮಕ್ಕಳನ್ನು ಆಟವಾಡಲು ಬಿಟ್ಟರು.

ವಿನುತಾಳ ಸಹಪಾಠಿ ವಿಶಾಲ್ ಬಾಲ್ ಆಟವಾಡುತ್ತಾ ಪಕ್ಷಿಗಳ ಗೂಡುಗಳಿದ್ದ ಕಡೆ ಹೋದ. ಅವು ಗೀಜಗನ ಗೂಡಾಗಿದ್ದವು. ಗೂಡಿನ ಬಳಿ ಹೋಗಿ ನೋಡಿ ಮೆಲ್ಲಗೆ ಒಂದನ್ನು ಕಿತ್ತುಕೊಂಡು ಯಾರಿಗೂ ಕಾಣದಂತೆ ಅಂಗಿಯೊಳಗೆ ಬಚ್ಚಿಟ್ಟುಕೊಂಡು ತಂದಿದ್ದ. ನಂತರ ಅದನ್ನು ಬುತ್ತಿ ಚೀಲದೊಳಗೆ ಇಟ್ಟುಕೊಂಡ. ಎಲ್ಲಾ ಮಕ್ಕಳು ಆಟವಾಡಿ, ಮನಸೋ ಇಚ್ಛೆ ಕುಣಿದು, ಕುಪ್ಪಳಿಸಿ ದಣಿದರು. ಊಟದ ಹೊತ್ತಾಯಿತು. ಮಕ್ಕಳು ತಾವು ತಂದ ಊಟದ ಡಬ್ಬಿಗಳನ್ನು ತೆರೆದು ಒಂದು ಕಡೆ ಇಡಲು ಶಿಕ್ಷಕರು ಹೇಳಿದರು. ನಂತರ ನಿಮಗೆ ಏನು ಇಷ್ಟ ಅದನ್ನು ಸಾಲಾಗಿ ಬಂದು ಎಷ್ಟು ಬೇಕೋ ಅಷ್ಟು ತಟ್ಟೆಯಲ್ಲಿ ಹಾಕಿಕೊಳ್ಳಲು ಸೂಚಿಸಿದರು. ಊಟವನ್ನು ವೇಸ್ಟ್ ಮಾಡದಂತೆ ಎಲ್ಲ ಒಟ್ಟಾಗಿ ಕುಳಿತು ತಿನ್ನಲು ಹೇಳಿದರು. ಊಟವಾದ ಬಳಿಕ ಮಕ್ಕಳು ಒಟ್ಟಾಗಿ ಅಂತ್ಯಾಕ್ಷರಿ ಹಾಡಿದರು. ಸೂರ್ಯ ಮುಳುಗಲು ಸಿದ್ಧನಾದ, ಸಂಜೆ ಆಗುತ್ತಿತ್ತು. ಶಿಕ್ಷಕರು ಮಕ್ಕಳೆಲ್ಲರನ್ನು ಬಸ್‌ಗೆ ಹತ್ತಿಸಿದರು. ಬಸ್ ಶಾಲೆ ತಲುಪಿತು, ಪಾಲಕರೆಲ್ಲ ತಮ್ಮ ಮಕ್ಕಳನ್ನು ಕರೆದುಕೊಂಡು ಹೋದರು.

ಬಸ್‌ನಲ್ಲಿ ವಿಶಾಲ್ ತನ್ನ ಬ್ಯಾಗಿನಲ್ಲಿದ್ದ ಆಗಾಗ್ಗೆ ಗೀಜಗನ ಗೂಡನ್ನು ತೆಗೆದು ತೆಗೆದು ನೋಡುತ್ತಿರುವುದನ್ನು ವಿನುತಾಳ ಕಣ್ಣಿಗೆ ಬಿದ್ದಿರುತ್ತದೆ. ವಿನುತಾ ಮನೆಗೆ ಮುಟ್ಟಿದರೂ ಗೂಡಿನ ಬಗ್ಗೆಯೇ ಚಿಂತಿಸುತ್ತಿರುತ್ತಾಳೆ. ಸರಿಯಾಗಿ ನಿದ್ದೆ ಬರುವುದಿಲ್ಲ. ಮರುದಿನ ಶಾಲೆಗೆ ಹೋಗಿ ಆ ಗೂಡಿನ ಬಗ್ಗೆ ವಿಶಾಲ್‌ನ ಬಳಿ ವಿಚಾರಿಸುತ್ತಾಳೆ. ಆಗ ವಿಶಾಲ್ 'ವಿನುತಾ ನಾ ಗೂಡು ತಂದದ್ದು, ನೋಡಿದ್ಯಾ? ಆ ಗೂಡನ್ನು ಮನೆಯ ಮಾಳಿಗೆ ಮೇಲೆ ಕಟ್ಟಿರುವೆ, ಅಲ್ಲಿ ಹಕ್ಕಿಗಳು ಬರಬಹುದು, ಮರಿಗಳು ಮಾಡಬಹುದು, ನನಗೆ ಪಕ್ಷಿಗಳು ಎಂದರೆ ಬಹಳ ಇಷ್ಟ, ಅದಕ್ಕೆ ಆ ಗೂಡನ್ನು ತಂದೆ' ಎಂದನು.



ಅದಕ್ಕೆ ವಿನುತಾ 'ನೋಡು ವಿಶಾಲ್ ನಿಜವಾದ ಪಕ್ಷಿಪ್ರೇಮಿಗಳು ಹೀಗೆಲ್ಲ ಮಾಡಲ್ಲ. ಈಗಾಗಲೇ ಗೂಡು ಕಟ್ಟಿದ ಪಕ್ಷಿಗಳ ಗತಿಯೇನು? ಅವು ಎಷ್ಟು ಕಷ್ಟಪಟ್ಟು ಗೂಡು ಕಟ್ಟಿರುತ್ತವೆ. ಈಗ ಪಕ್ಷಿ ತಮ್ಮ ಗೂಡಿಗಾಗಿ ಹುಡುಕುತ್ತಿರುತ್ತವೆ. ನಾವು ಹಾಗೆಲ್ಲ ಗೂಡನ್ನು ಮನೆಗೆ ತರಬಾರದು, ಅದು ಎಲ್ಲಿತ್ತೊ ಅಲ್ಲಿ ಕಟ್ಟಿ ಬಾ' ಎಂದು ಹೇಳಿದ ನಂತರ ವಿಶಾಲ್‌ಗೆ ಜ್ಞಾನೋದಯ ಆಯಿತು. ವಿಶಾಲ್ ತಾನು ಗೂಡು ತಂದ ವಿಷಯವನ್ನು ಕ್ಲಾಸ್ ಟೀಚರ್‌ಗೆ ಹೇಳಿದ, ಅದನ್ನು ತಂದಲ್ಲಿಯೇ ಕಟ್ಟಬೇಕು ಸರ್, ನನ್ನಿಂದ ತಪ್ಪಾಗಿದೆ ಎಂದ. ಕ್ಲಾಸ್ ಟೀಚರ್ ಮುಖ್ಯೋಪಾಧ್ಯಾಯರಿಗೆ ಗೂಡಿನ ವಿಷಯ ತಿಳಿಸಿ ವಿಶಾಲ್ ವಿದ್ಯಾರ್ಥಿಯ ಜೊತೆ ಆ ಸ್ಥಳಕ್ಕೆ ಹೋಗಿ ಗೂಡನ್ನು ಕಟ್ಟಿ ಬರಲು ಅನುಮತಿ ತೆಗೆದುಕೊಂಡರು. ಅವರು ಗೂಡು ಕಟ್ಟಲು ಹೋದಾಗ, ಎರಡು ಗೀಜಗ ಅಲ್ಲೆ ತಮ್ಮ ಗೂಡಿಗಾಗಿ ಹುಡುಕಾಡುತ್ತಿದ್ದವು. ■